# 1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು
## ಸಿ.ಸಿ. 1973/2022

| | | |
|---|---|---|
| ಸಾಕ್ಷಿಯ ಹೆಸರು | :- | ಶೋಭಾ |
| ತಂದೆ/ಗಂಡನ ಹೆಸರು | :- | ಸಂಪತ್ತಕುಮಾರ |
| ವಯಸ್ಸು | :- | 43 ವರ್ಷ |
| ಉದ್ಯೋಗ | :- | ಗೃಹಿಣಿ |
| ವಾಸಸ್ಥಳ | :- | ಚಂದುಪುರ |

(ಸಾಕ್ಷಿಗೆ ದಿನಾಂಕಃ 28-01-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ

ದೂರುದಾರರು ನನಗೆ ಪರಿಚಯ ಇಲ್ಲ. ದೂರುದಾರರ ಮತ್ತು ನಡುವೆ ಯಾವುದೇ ವ್ಯವಹಾರ ಆಗಿಲ್ಲ. ನಾನು ಸದರಿಯವರಿಗೆ ಚೆಕ ನೀಡಿಲ್ಲ. ನಾನು ಚೆಕ್ಕಿಗೆ ಯಾವುದೇ ಸಹಿ ಮಾಡಿಲ್ಲ ಮತ್ತು ದೂರುದಾರರಿಗೆ ನೀಡಿಲ್ಲ. ನಿಪಿ 1 ರ ಚೆಕ್ಕನ್ನು ಮಠದ ಹೊನ್ನನಾಯಕನಹಳ್ಳಿಯ ಹೆಚ್ ಆರ್ ಆನಂದರವರಿಗೆ 2022ರಲ್ಲಿ ಜಮೀನಿನ ಅಡಮಾನ ಮಾಡಿ ಸಾಲ ಪಡೆದುಕೊಂಡಿದ್ದು ಬಡ್ಡಿ ಕಟ್ಟಲು ಸಾಧ್ಯವಾಗದ ಕಾರಣ ಸದರಿಯವರು ಚೆಕ್ಕು ಕೇಳಿದ್ದು ಅದರಂತೆ ಚೆಕ ನೀಡಿದ್ದೇವೆ . ಸದರಿ ಚೆಕ್ಕು ನೀಡುವ ಪೂರ್ವದಲ್ಲಿ ಮಧ್ಯಸ್ಥಗಾರರನ್ನು ಕರೆದು ಸದರಿ ಆನಂದರವರು ಜಗಳ ಮಾಡುತ್ತಿರುವುದನ್ನು ಹೇಳಿದಾಗ ಸದರಿಯವರಾದ ಯಾಲಕ್ಕಿಗೌಡರವರು ಸಾಲದ ಹಣ 20 ಲಕ್ಷವನ್ನು ನೀಡಿ ಸದರಿ ಕರಾರನ್ನು ರದ್ದು ಪಡಿಸಿರುತ್ತಾರೆ. ಸದರಿ ವೇಳೆಯಲ್ಲಿ ಚೆಕ್ಕನ್ನು ಹಿಂದುರುಗಿಸುವಂತೆ ಕೇಳಿದ್ದು ಸದರಿಯವರು ಮನೆಯಲ್ಲಿ ಚೆಕ್ಕು ಇದ್ದು ಅಲ್ಲಿಗೆ ಬಂದು ಪಡೆದುಕೊಳ್ಳುವಂತೆ ಹೇಳಿದ್ದರು. ಮನೆಯ ಬಳಿ ಹೋಗಿ ಕೇಳಿದಾಗ ಕಚೇರಿ ಬಳಿ ಇದ್ದು ಅಲ್ಲಿಗೆ ಬರುವಂತೆ ಹೇಳಿದರು. ನಂತರ ನಾನು ಟೂರಿಗೆ ಹೋಗಿದ್ದು 15-20 ದಿನಗಳು ಬಿಟ್ಟು ಬರುವಂತೆ

ಹೇಳಿದ್ದರು. ನಂತರ ಇನ್ನೂ 2 ಲಕ್ಷ ಹಣ ನೀಡುವವರೆಗೆ ಚೆಕ್ಕು ನೀಡುವುದಿಲ್ಲ ಎಂದು ಹೇಳಿದರು. ಒಂದು ಚೆಕ್ಕನ್ನು ಇರಿಸಿಕೊಂಡು ಉಳಿದ ಚೆಕ್ಕುಗಳನ್ನು ಹಿಂದುರುಗಿಸುವಂತೆ ಕೇಳಿದ್ದು ಆದರೆ ಬೇರೆ ಹುಡುಗರಿಂದ ನನ್ನ ಗಂಡನನ್ನು ಬೈಯಿಸಿ ಕಳುಹಿಸಿರುತ್ತಾರೆ. ನಂತರ ನನ್ನ ಮತುತ ನನ್ನ ಗಂಡನ ವಿರುದ್ಧ ಮಳವಳ್ಳಿ , ಮಂಡ್ಯ, ಮದ್ದೂರು ಗಳಲ್ಲಿ ಸದರಿಯವರು ಚೆಕ ಪ್ರಕರಣವನು ದಾಖಲಿಸಿರುತ್ತಾರೆ. ನನ್ನ ಗಂಡನ ವಿರುದ್ಧ ಮದ್ದೂರಿನಲ್ಲಿ 5 ಪ್ರಕರಣ , ಮಳವಳ್ಳಿ ಯಲ್ಲಿ 4 , ಮಂಡ್ಯದಲ್ಲಿ 2 ಪ್ರಕರಣಗಳನ್ನು ದಾಖಲಿಸಿದ್ದಾರೆ . ನನ್ನ ವಿರುದ್ಧ ಮದ್ದೂರಿನಲ್ಲಿ 1 , ಮಂಡ್ಯದಲ್ಲಿ 1 ಮತ್ತು ಮಳವಳ್ಳಿಯಲ್ಲಿ 1 ಪ್ರಕರಣ ದಾಖಲಿಸಿದ್ದಾರೆ . ಸದರಿಯವರನ್ನು ಹೊರತು ಪಡಿಸಿ ದೂರದಾರರಿಗೂ ನನಗೆ ಯಾವುದೇ ಪರಿಚಯ ಇಲ್ಲ. ಆದ್ದರಿಂದ ನನಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು